SC:66/2024
PW:09 CW:06

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ57<br>ನಮೂನೆ ಸಂಖ್ಯೆ4<br>(ಸಿವಿಲ್) |

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 66/2024

| | |
|---|---|
| PW | 09 |
| CW | 06 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 09.07.2026.

| | | |
|---|---|---|
| ಸಾಕ್ಷಿಯ ಹೆಸರು | : | ಸಪ್ತಗಿರಿ |
| ತಂದೆಯ ಹೆಸರು | : | ರಾಮಯ್ಯ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಸೇವಕ , ಸ್ಟೆಲ್ಲಾ ಶಾಲೆ |
| ವಾಸಸ್ಥಳ | : | ಗೌರಿಬಿದನೂರು |

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

ನನಗೆ ಚಾಸಾ.7 ಗೊತ್ತಿರುವುದಿಲ್ಲ . ನ್ಯಾಯಾಲಯದ ಮುಂದೆ ಹಾಜರಿರುವ 3 ನೇ ಆರೋಪಿ ಹಾಗೂ ವಿ ಸಿ ಮೂಲಕ ಹಾಜರುಪಡಿಸಿರುವಂತಹ 2 ನೇ ಆರೋಪಿ ನನಗೆ ಗೊತ್ತಿರುವುದಿಲ್ಲ. 1 ನೇ ಆರೋಪಿ ಗೈರು ಹಾಜರಿದ್ದು ಅವರ ಪರ ವಕೀಲರು ಗುರುತಿಸುವಿಕೆಯ ಬಗ್ಗೆ ಯಾವುದೇ ವಿವಾದ ಮಾಡಿರುವುದಿಲ್ಲ. ಈಗ ನನಗೆ ತೋರಿಸುತ್ತಿರುವ 1 ಮತ್ತು 2 ನೇ ಆರೋಪಿತರು ತೋರಿಸಿದ ಕೃತ್ಯ ಸ್ಥಳದ ಪಂಚನಾಮೆಗಳ ಮೇಲೆ ಇರುವ ಸಹಿಗಳು ನನ್ನ ಸಹಿಗಳು ಇರುತ್ತದೆ . ಸಾಕ್ಷಿಯು ಗುರುತಿಸಿದ ಸಹಿಗಳು ಇರುವ ಕೃತ್ಯ ನಡೆದ ಪಂಚನಾಮೆಗಳ ದೃಢೀಕೃತ ನಕಲುಗಳನ್ನು ನಿಪಿ.11 ಮತ್ತು 12 ಎಂದು , ಸಾಕ್ಷಿ ಗಳ ಸಹಿಗಳನ್ನು ಕ್ರಮವಾಗಿ ನಿಪಿ.11 (ಎ) , 12 (ಎ) ಎಂದು ಗುರುತಿಸಲಾಯಿತು

2. ಸುಮಾರು 2 ವರ್ಷದ ಹಿಂದೆ ಗೌರಿಬಿದನೂರು ನಗರ ಪೊ.ಠಾಣೆಯಲ್ಲಿ ನಿಪಿ.11 ಮತ್ತು 12 ಕ್ಕೆ ಸಹಿಗಳನ್ನು ಮಾಡಿರುತ್ತೇನೆ . 1 ಮತ್ತು 2 ನೇ ಆರೋಪಿತರು ನನ್ನನ್ನು ಎಲ್ಲಿಯೂ ಕರೆದುಕೊಂಡು ಹೋಗಿ ಯಾವುದೇ ಸ್ಥಳವನ್ನು ತೋರಿಸಿರುವುದಿಲ್ಲ ಮತ್ತು ಪೊಲೀಸರು ನನ್ನನ್ನು ಠಾಣೆಯಿಂದ ಎಲ್ಲಿಗೂ ಕರೆದುಕೊಂಡು ಹೋಗಿರಲಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಸ್ಥಳದ ಪಂಚನಾಮೆಯನ್ನು ಮಾಡಿರುವುದಿಲ್ಲ ನಿಪಿ.11 ಮತ್ತು 12 ರಲ್ಲಿ ಬರೆದ ವಿಷಯ ಗೊತ್ತಿರುವುದಿಲ್ಲ . ಈ ಸಂಬಂಧ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ .

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

3. ದಿಃ03.03.2024 ರಂದು ಮ.1.00 ಗಂಟೆ ಸಮಯದಲ್ಲಿ ಪಂಚರಾದ ನಮ್ಮನ್ನು ಗೌರಿಬಿದನೂರು ನಗರ ಪೊ.ಠಾಣೆಯ ಮೊ.ಸಂ.239/2022 ಪ್ರಕರಣದಲ್ಲಿ ಗೌರಿಬಿದನೂರು ನಗರದ ಬ್ಯಾಂಕ್ ಕಾಲೋನಿಯ ಅಂಗಡಿಯಲ್ಲಿ ಇದ್ದ ಮಹಿಳೆಯಿಂದ ಚಿನ್ನದ ಮಾಂಗಲ್ಯ ಸರವರನ್ನು ಸುಲಿಗೆ ಮಾಡಿದ್ದ 1 ಮತ್ತು 2 ನೇ ಆರೋಪಿತರು ತಾವು ಸುಲಿಗೆ ಮಾಡಿದ ಸ್ಥಳವನ್ನು ತೋರಿಸುವುದಾಗಿ ಸ್ವಇಚ್ಛಾ ಹೇಳಿಕೆಯನ್ನು ಹೇಳಿದ್ದು ನಮ್ಮನ್ನು ಮತ್ತು ಪೊಲೀಸರನ್ನು 1 ನೇ ಆರೋಪಿಯು ಸರ್ಕಾರಿ ಜೀಪಿನಲ್ಲಿ ಎಂ.ಜಿ ವೃತ್ತ ಬೆಂಗಳೂರು , ನಾಗಯ್ಯರೆಡ್ಡಿ ವೃತ್ತ , ಮೂಲಕ ಬ್ಯಾಂಕ್ ಕಾಲೋನಿಗೆ ಹೋಗುತ್ತಿದ್ದಾಗ ಆರೋಪಿತರು ಜೀಪಿನ್ನು ನಿಲ್ಲಿಸುವಂತೆ ಕೇಳಿಕೊಂಡಿದ್ದು ಆಗ 1 ನೇ ಆರೋಪಿಯು ತಾನು ದಿಃ 17.12.2022 ರಂದು ಮಧ್ಯಾಹ್ನದ ಸಮಯದಲ್ಲಿ ಅಂಗಡಿಯ ಬಳಿ ಬಂದು ಅಂಗಡಿಯಲ್ಲಿ ಇದ್ದ ಅಜ್ಜಿಯನ್ನು ತಳ್ಳಿ ಆಕೆಯ ಕೊರಳಲ್ಲಿ ಇದ್ದ ಮಾಂಗಲ್ಯ ಸರವನ್ನು ಕಿತ್ತು ಕೊಂಡು

ಓಡಿ ಹೋದ ಸ್ಥಳ ಇದೇ ಇರುತ್ತದೆ ಎಂದು ತೋರಿಸಿದು್ದ ಸದರಿ ಸ್ಥಳದ ಪಂಚನಾಮೆಯನ್ನು ತನಿಖಾಧಿಕಾರಿಗಳು ಮ.1.00 ರಿಂದ 2.00 ಗಂಟೆ ವರೆಗೆ ನಮ್ಮ ಸಮಕ್ಷಮ ಪಂಚನಾಮೆ ಕ್ರಮವನ್ನು ನಿಪಿ.11 ರಂತೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ . ಅದೇ ರೀತಿ ಮ.2.30 ರಿಂದ 3.30 ಗಂಟೆ ಸಮಯದಲ್ಲಿ 2 ನೇ ಆರೋಪಿಯು ತೋರಿಸಿದ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ತನಿಖಾಧಿಕಾರಿಗಳು ನನ್ನ ಸಮಕ್ಷಮ ನಿಪಿ.12 ರಂತೆ ಮ.2.30 ರಿಂದ 3.00 ಗಂಟೆಯಲ್ಲಿ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ . ಸದರಿ ಪಂಚನಾಮೆಗಳಲ್ಲಿ ಬರೆದ ವಿಷಯ ನನಗೆ ಗೊತ್ತಿದ್ದು ನನಗೆ ಓದಿ ಹೇಳಿ ನಂತರ ನಾನು ತೆಗೆದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ .

3. ನಾನು ಈಗ ಓದಿ ಹೇಳಿದಂತೆ " ದಿಃ03.03.2024 ರಂದು ಮ.1.00 ಗಂಟೆ ಸಮಯದಲ್ಲಿ ನಾನು ಮತ್ತು ನಾಗರಾಜ್ ರವರು ಗೌರಿಬಿದನೂರು

.......................................................................................................................

.......................................................................................................................

....ಪಂಚನಾಮೆಗೆ ಸಹಿ ಮಾಡಿರುತ್ತೇವೆ ಆರೋಪಿಗಳನ್ನು ನೋಡಿದ್ದು ಮತ್ತೊಮ್ಮೆ ನೋಡಿದರೆ ಗುರುತಿಸುತ್ತೇವೆ " ಎಂದು ಈಗ ಓದಿ ಹೇಳಿದ ರೀತಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ–13 ಎಂದು ಗುರುತಿಸಲಾಯಿತು.

4. ನನಗೆ ಘಟನೆಯ ಬಗ್ಗೆ ಮಾಹಿತಿ ಇದ್ದು, ಆ ಬಗ್ಗೆ ನಾನು ನಿಪಿ–13 ರಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1 ರಿಂದ 3 ನೇ ಆರೋಪಿ ಪರ ವಕೀಲರಿಂದಃ</u>**

ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ .

SC:66/2024
PW:09 CW:06

**<u>ಮರುವಿಚಾರಣೆಃ</u> ಇಲ್ಲ**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ** 09.07.2026 **ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು** )

ಓದಿ ಹೇಳಿ ಕೇಳಿ ಸರಿ ಇದೆ

sd/-
**(ಸಿದ್ದಣ್ಣ.ಬಿ.ಹಂದ್ರಾಳ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.